ಕ್ರಮ ಕೈಗೊಳ್ಳಲಾಗುವುದೇ?

ಆ. ಈ ಫ್ಲೋರೈಡ್ ನೀರನ್ನು ಶುದ್ಧೀಕರಣ ಮಾಡಲು ಯಾವ ಯೋಜನೆ ಹಾಕಿಕೊಳ್ಳಲಾಗಿದೆ?

ಇ. ಯಾವುದೇ ಯೋಜನೆ ಇಲ್ಲದಿದ್ದರೆ ಜನರ ಆರೋಗ್ಯದ ಪರಿಸ್ಥಿತಿ ಸುಧಾರಣೆ ಬಗ್ಗೆ ಸರ್ಕಾರದ ನಿಲುವೇನು?

ಉತ್ತರ

ಆ. ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲ್ಲೂಕಿನ ಗ್ರಾಮೀಣ ಪ್ರದೇಶಗಳ 62 ಕುಡಿಯುವ ನೀರಿನ ಮೂಲಗಳಲ್ಲಿ ಅಧಿಕ ಫ್ಲೋರೈಡಿನ ಅಂಶವಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಗುಣಮಟ್ಟ ಸಮಸ್ಯೆ ಎದುರಿಸುತ್ತಿರುವ ಜನವಸತಿಗಳಿಗೆ ಸುರಕ್ಷಿತ ಕುಡಿಯುವ ನೀರಿನ ಪೂರೈಕೆಗಾಗಿ ಯೋಜನೆಯನ್ನು ತಯಾರಿಸಲಾಗುತ್ತಿದೆ.

ಆ. ಆದಷ್ಟು ಮಟ್ಟಿಗೆ, ಸುರಕ್ಷಿತ ಕುಡಿಯುವ ನೀರನ್ನು ಒದಗಿಸಲು, ಮೇಲ್ಕೆ ಮೂಲಗಳು : ದೂರದ ಕೊಳವೆಬಾವಿಗಳನ್ನು ಬಳಸಿಕೊಳ್ಳಲು ಉದ್ದೇಶಿಸಿದೆ. ಇಂತಹ ಮೂಲಗಳು ಲಭ್ಯವಿಲ್ಲದಿರುವ ಜನವಸತಿಗಳಿಗೆ ಶುದ್ಧೀಕರಣ ಸ್ಥಾವರಗಳನ್ನು ಒದಗಿಸಲು ಉದ್ದೇಶಿಸಲಾಗಿದೆ.

ಇ. ಯೋಜನಾ ವರದಿಯನ್ನು ತಯಾರಿಸಲಾಗುತ್ತಿದೆ.

ಹೊಳೆ ಹೊನ್ನೂರು ಕ್ಷೇತ್ರದಲ್ಲಿ ಕುಡಿಯುವ ನೀರಿನ ಬೋರ್‌ವೆಲ್‌ಗಳು ಬತ್ತಿ ಹೋಗುತ್ತಿರುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1124(1361)

ಸದಸ್ಯರ ಹೆಸರು: ಶ್ರೀ ಕರಿಯಣ್ಣ(ಹೊಳೆಹೊನ್ನೂರು)

ಉತ್ತರಿಸುವ ಸಚಿವರು: ಶ್ರೀ ಎಂ.ವೈ.ಘೋರ್ಪಡೆ(ಗ್ರಾ.ಪ.ರಾಜ್ ಸಚಿವರು)

ಪ್ರಶ್ನೆ

ಆ. ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕು ಹೊಳೆಹೊನ್ನೂರು ಕ್ಷೇತ್ರಕ್ಕೆ ಬರುವ ಗ್ರಾಮಗಳಲ್ಲಿ ಕುಡಿಯುವ ನೀರಿನ ಬೋರ್‌ಗಳು ಬತ್ತಿ ಹೋಗುತ್ತಿದ್ದು, ಪೈಪು ನೀರಿನ ಯೋಜನೆ ಮತ್ತು ಸಣ್ಣಪ್ರಮಾಣದ ನೀರಿನ ಯೋಜನೆಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ ರೀತಿ ನೀರು ಕಡಿಮೆಯಾಗಿ ಬತ್ತಿರುವ ಬೋರ್‌ಗಳನ್ನು ಕೊರೆದು ಗ್ರಾಮದ ದೊಡ್ಡಪ್ರಮಾಣದ ಮತ್ತು ಸಣ್ಣ ಪ್ರಮಾಣದ ಕುಡಿಯುವ ನೀರಿನ ಯೋಜನೆ ಮುಖೇನ ನೀರನ್ನು ಜನರಿಗೆ ಕೊಡಲು ಯಾವ ಕ್ರಮ ಕೈಗೊಳ್ಳಲಾಗುವುದು?

ಇ. ಇದಕ್ಕಾಗಿ ಜಿಲ್ಲಾ ಪಂಚಾಯ್ತಿಗೆ ಯಾವ ಮಾರ್ಗ ಸೂಚಿಸಿ ಹಣವನ್ನು ಒದಗಿಸಲಾಗುವುದು?

ಉತ್ತರ

ಅ. ಹೊಳೆಹೊನ್ನೂರು ಕ್ಷೇತ್ರದ ಕೆಲವು ಗ್ರಾಮಗಳಲ್ಲಿ ಬೇಸಿಗೆಯಲ್ಲಿ ಬೋರ್‌ವೆಲ್‌ಗಳ ಜಲಮೂಲದ ಇಳುವರಿ ಕಡಿಮೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ. ಕುಡಿಯುವ ನೀರಿನ ಜಲಮೂಲದ ಇಳುವರಿ ಕಡಿಮೆಯಾಗಿರುವುದರಿಂದ : ಬತ್ತಿರುವ ಕೊಳವೆಬಾವಿಗಳನ್ನು ಪುನಃಶ್ಚೇತನಗೊಳಿಸಲು : ಪುನರುಜ್ಜೀವನಗೊಳಿಸಲು ಹೈಡ್ರೋಫ್ರಾಕ್ಚರಿಂಗ್ ಯೂನಿಟ್ ಅನ್ನು ಬಳಸಲು ಉದ್ದೇಶಿಸಲಾಗಿದೆ ಮತ್ತು ಅಂತರ್ಜಲ ಅಭಿವೃದ್ಧಿ ಕಾಮಗಾರಿಗಳನ್ನು ಪಿಎಂಜಿವೈ ಮತ್ತು ಜಲಾನಯನ ಯೋಜನೆಯಡಿ ಆದ್ಯತೆ ಮೇಲೆ ಅನುಷ್ಠಾನಗೊಳಿಸಲಾಗುತ್ತಿದೆ.

ಇ. ಜಿಲ್ಲಾಪಂಚಾಯ್ತಿಗಳಿಗೆ ಕುಡಿಯುವ ನೀರು ಪೂರೈಕೆಗಾಗಿ ಎಆರ್‌ಡಬ್ಲ್ಯುಎಸ್ ಮತ್ತು ಎನ್‌ಆರ್‌ಡಬ್ಲ್ಯುಎಸ್ ಯೋಜನೆಗಳಡಿ ಅನುದಾನ ಒದಗಿಸಲಾಗುತ್ತಿದೆ. ಅಂತರ್ಜಲ ಅಭಿವೃದ್ಧಿಗಾಗಿ ಪಿಎಂಜಿವೈ ಜಲಾನಯನ ಯೋಜನೆ, ಡಿಪಿಎಪಿ, ಡಿಡಿಪಿ ಯೋಜನೆಗಳಲ್ಲಿ ಅನುದಾನ ಒದಗಿಸಲಾಗುತ್ತಿದೆ.

ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಬರುವ ರಸ್ತೆ ದುರಸ್ತಿಗಾಗಿ ಹಣ ಬಿಡುಗಡೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1125(1362)

ಸದಸ್ಯರ ಹೆಸರು: ಕರಿಯಣ್ಣ(ಹೊಳೆಹೊನ್ನೂರು)

ಉತ್ತರಿಸುವ ಸಚಿವರು: ಶ್ರೀ ಎಂ.ವೈ.ಘೋರ್ಪಡೆ(ಗ್ರಾ.ಪ.ರಾಜ್ ಸಚಿವರು)

ಪ್ರಶ್ನೆ

1. ಜಿಲ್ಲಾಪಂಚಾಯ್ತಿ ವ್ಯಾಪ್ತಿಗೆ ಬರುವ ರಸ್ತೆಗಳ ದುರಸ್ತಿಗೆ ಯಾವ ಆಧಾರದ ಮೇಲೆ ಹಣವನ್ನು ಬಿಡುಗಡೆ ಮಾಡಲಾಗುತ್ತದೆ?